# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577415, ಶಿವಮೊಗ್ಗ, ಕರ್ನಾಟಕ.
Phone No: 08282-256166, mob: 7022254993ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in

ಸಂಖ್ಯೆ: ಕುವಿ/ಪವಿ/ಪಿಜಿ/5239 /2023-24 ದಿನಾಂಕ: 16-10-2023

## ಸುತ್ತೋಲೆ

**ವಿಷಯ:** **ಅಕ್ಟೋಬರ್/ನವೆಂಬರ್-2023**ರಲ್ಲಿ ಜರುಗಲಿರುವ ವಿವಿಧ ಸ್ನಾತಕೋತ್ತರ (ರೆಗ್ಯುಲರ್) ಪದವಿಯ ಪ್ರಥಮ ಸೆಮಿಸ್ಟರ್ (ರಿಪೀಟರ್ಸ್) ವಿದ್ಯಾರ್ಥಿಗಳ ಪರೀಕ್ಷೆ ಕುರಿತು.

**ಉಲ್ಲೇಖ:**
1. ಈ ಕಛೇರಿ ಪರೀಕ್ಷಾ ಪ್ರಕಟಣೆ ಸಂಖ್ಯೆ: ಕುವಿ/ಪವಿ/ಪಿಜಿ/4868/2023-24. ದಿನಾಂಕ: 26-09-2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13-10-2023

*****

ವಿಶ್ವವಿದ್ಯಾಲಯ ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರ್ ಮೇ- 2023ರ ಮಾಹೆಯಲ್ಲಿ ನಡೆದ (ರೆಗ್ಯುಲರ್/ರಿಪೀಟರ್ಸ್) ಪರೀಕ್ಷೆಗಳಲ್ಲಿ ರೆಗ್ಯುಲರ್ ವಿದ್ಯಾರ್ಥಿಗಳ ಫಲಿತಾಂಶ ಮಾತ್ರ ಪ್ರಕಟಿಸಿದ್ದು ರಿಪೀಟರ್ಸ್ ವಿದ್ಯಾರ್ಥಿಗಳ ಫಲಿತಾಂಶವು **ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿನ ತಾಂತ್ರಿಕ ದೋಷದಿಂದ ಪ್ರಕಟಿಸಲು** ವಿಳಂಬವಾಗಿರುತ್ತದೆ.

ಉಲ್ಲೇಖಿತ 01ರ ಪರೀಕ್ಷಾ ಪ್ರಕಟಣೆಯಲ್ಲಿ **ಅಕ್ಟೋಬರ್/ನವೆಂಬರ್-2023**ರ ಮಾಹೆಯಲ್ಲಿ ನಡೆಯಲಿರುವ ವಿವಿದ ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರ್ (ರಿಪಿಟರ್ಸ್) ವಿದ್ಯಾರ್ಥಿಗಳಿಗೆ ದಿನಾಂಕ:31-10-2023ರಿಂದ ಪರೀಕ್ಷೆಗಳನ್ನು ನಡೆಸಲು ನಿಗದಿಪಡಿಸಲಾಗಿತ್ತು.

ಆದರೆ, ಸ್ನಾತಕೋತ್ತರ ಪದವಿಯ ಪ್ರಥಮ ಸೆಮಿಸ್ಟರ್ ಮೇ- 2023ರ ಮಾಹೆಯಲ್ಲಿ ನಡೆದ ರಿಪೀಟರ್ಸ್ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸದೇ ಇರುವುದರಿಂದ, ಸದರಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಿದ ನಂತರವೇ **ಅಕ್ಟೋಬರ್/ನವೆಂಬರ್-2023**ರ ಮಾಹೆಯ ಪ್ರಥಮ ಸೆಮಿಸ್ಟರ್ ರಿಪೀಟರ್ಸ್ ವಿದ್ಯಾರ್ಥಿಗಳ ಪರೀಕ್ಷೆಯನ್ನು ನಡೆಸಬೇಕಾಗಿರುತ್ತದೆ. ಈ ಬಗ್ಗೆ ಪ್ರತ್ಯೇಕವಾಗಿ ಪರೀಕ್ಷಾ ದಿನಾಂಕವನ್ನು ನಿಗದಿಪಡಿಸಿ, ಮೇಲ್ಕಂಡ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ಎಲ್ಲಾ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅಧಿಸೂಚನೆಯನ್ನು ಹೊರಡಿಸಿ ಕ್ರಮ ಕೈಗೊಳ್ಳಲಾಗುವುದು.

ಇನ್ನುಳಿದಂತೆ ಸದರಿ ಮಾಹೆಯಲ್ಲಿ ನಿದಿಪಡಿಸಲಾಗಿರುವ 02, 03 ಮತ್ತು 04ನೇ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ನಿಗದಿಪಡಿಸಿದ ದಿನಾಂಕಗಳಂದೆ ನಡೆಯುತ್ತವೆ. ಅವುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. (ಈಗಾಗಲೇ ಪ್ರಥಮ ಸೆಮಿಸ್ಟರ್ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳು (ರಿಪೀಟರ್ಸ್) ಇದ್ದಲ್ಲಿ ಅವರುಗಳು ಮತ್ತೊಮ್ಮೆ ಶುಲ್ಕ ಪಾವತಿಸುವ ಅವಶ್ಯಕತೆ ಇರುವುದಿಲ್ಲ.)

ಮೇಲ್ಕಂಡ ಮಾಹಿತಿಯನ್ನು ಸಂಬಂಧಿಸಿದ ವಿದ್ಯಾರ್ಥಿಗಳ ಗಮನಕ್ಕೆ ಕಡ್ಡಾಯವಾಗಿ ತರುವುದು.

ಕುಲಸಚಿವರು (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ. 16/10/23
ಜ್ಞಾನಸಹ್ಯಾದ್ರಿ.
ಶಂಕರಘಟ್ಟ - 577 451.

*ಇವರಿಗೆ,*

1. ಎಲ್ಲಾ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,/ಶಿವಮೊಗ್ಗ/ಕಡೂರು.
2. ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಕಡೂರು./ ಐ.ಡಿ.ಎಸ್.ಜಿ. ಕಾಲೇಜು ಕ್ಯಾಂಪಸ್. ಚಿಕ್ಕಮಗಳೂರು

ಪು.ತಿ.ನೋ